For more job news visit : www.kpscvaani.com

ಕರ್ನಾಟಕ ಸರ್ಕಾರ
ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ,
5ನೇ ಮಹಡಿ, ಪ್ಲಾಟ್ ನಂ.1243, ಕೆ.ಎಸ್.ಐ.ಐ.ಡಿ.ಸಿ.ಕಟ್ಟಡ, ಐ.ಟಿ. ಪಾರ್ಕ್,
ಸೌತ್ ಬ್ಲಾಕ್, ರಾಜಾಜಿನಗರ, ಇಂಡಸ್ಟ್ರೀಯಲ್ ಎಸ್ಟೇಟ್, ಬೆಂಗಳೂರು-560044
ದೂರವಾಣಿ ಸಂಖ್ಯೆ:080-22372738, 22342163 E-mail:karnregs.office@gmail.com

ಸಂಖ್ಯೆ:ಗ್ರಾಅಪ:363:ಉಖಾಯೋ:2022 ದಿನಾಂಕ:06.05.2022

ಅಧಿಸೂಚನೆ

ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಓಂಬುಡ್ಸ್‌ಮನ್‌ರವರು ಹೊರಡಿಸುವ ಆದೇಶಗಳಿಂದ ಭಾದಿತರಾದವರು ಸಲ್ಲಿಸುವ ಮೇಲ್ಮನವಿಗಳನ್ನು ಪರಿಶೀಲಿಸಿ ಇತ್ಯರ್ಥಗೊಳಿಸುವ ಸಲುವಾಗಿ ಮೂವರು ಸದಸ್ಯರನ್ನೊಳಗೊಂಡ **ಓಂಬುಡ್ಸ್‌ಮನ್ ಮೇಲ್ಮನವಿ ಪ್ರಾಧಿಕಾರವನ್ನು ಸ್ಥಾಪಿಸಲಾಗಿದೆ. ಪ್ರಾಧಿಕಾರದಲ್ಲಿ** ಇಬ್ಬರು ಸದಸ್ಯರ ಹುದ್ದೆಗಳು ಖಾಲಿ ಇರುತ್ತವೆ.

1. ಸದರಿ ಹುದ್ದೆಗಳಿಗೆ ಈ ಕೆಳಕಂಡ ಕ್ಷೇತ್ರಗಳಲ್ಲಿ ಅನುಭವ ಹೊಂದಿರುವ ಅಭ್ಯರ್ಥಿಗಳನ್ನು ಆಯ್ಕೆ ಮಾಡಲು ಅರ್ಜಿಗಳನ್ನು ಆಹ್ವಾನಿಸಲಾಗಿದೆ.
   1) ನಾಗರೀಕ ಸೇವೆ(Civil Service)ಯಲ್ಲಿ 30 ವರ್ಷಗಳ ಅನುಭವ ಹೊಂದಿರುವ ಒಬ್ಬ ಅಭ್ಯರ್ಥಿ.
   2) ನಾಗರೀಕ ಸೇವಾ ಸಂಘಟನೆ (Civil Society Organization)ಗಳಲ್ಲಿ 30 ವರ್ಷ ಕಾರ್ಯನಿರ್ವಹಿಸಿದ ಅನುಭವ ಹೊಂದಿರುವ ಒಬ್ಬ ಅಭ್ಯರ್ಥಿ.
2. ಮೇಲ್ಕಂಡ ಹುದ್ದೆಗಳಿಗೆ ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ಈ ಕೆಳಕಂಡ ಅರ್ಹತೆಗಳನ್ನು ಹೊಂದಿರತಕ್ಕದ್ದು.
   - ಶ್ರೇಷ್ಠತಮವಾದ ಹಾಗೂ ನಿಷ್ಕಳಂಕ ಸೇವೆ ಸಲ್ಲಿಸಿರತಕ್ಕದ್ದು.
   - ದೈಹಿಕವಾಗಿ ಆರೋಗ್ಯವಂತ ಹಾಗೂ ಕ್ರಿಯಾಶೀಲರಾಗಿದ್ದು, ಗ್ರಾಮೀಣ ಪ್ರದೇಶಗಳಲ್ಲಿ ಕ್ಷೇತ್ರ ಭೇಟಿ ಕೈಗೊಳ್ಳಲು ಸಮರ್ಥರಿರಬೇಕು.
   - ಯಾವುದೇ ರಾಜಕೀಯ ಪಕ್ಷದ ಅಥವಾ ನಿಷೇಧಿತ ಸಂಘ ಸಂಸ್ಥೆಗಳ ಸದಸ್ಯರಾಗಿರತಕ್ಕದಲ್ಲ.
   - ಅರ್ಜಿ ಸಲ್ಲಿಸುವ ಕೊನೆಯ ದಿನಾಂಕದೊಳಗೆ 66 ವರ್ಷಗಳ ವಯೋಮಿತಿಯನ್ನು ಮೀರಿರತಕ್ಕದ್ದಲ್ಲ.
3. ಓಂಬುಡ್ಸ್‌ಮನ್ ಮೇಲ್ಮನವಿ ಪ್ರಾಧಿಕಾರದ ಸದಸ್ಯರು 2 ವರ್ಷಗಳ ಅಧಿಕಾರವಧಿ ಹೊಂದಿದ್ದು, ಕಾರ್ಯನಿರ್ವಹಣೆಯನ್ನು ಆಧರಿಸಿ ಒಂದು ಬಾರಿಗೆ ಒಂದು ವರ್ಷದಂತೆ ಗರಿಷ್ಠ ಎರಡು ವರ್ಷ ಅಥವಾ 68 ವರ್ಷ ವಯಸ್ಸಿನವರೆಗೆ, ಇವುಗಳಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಅಧಿಕಾರ ಅವಧಿಯನ್ನು ವಿಸ್ತರಿಸಬಹುದಾಗಿದೆ.
4. ಓಂಬುಡ್ಸ್‌ಮನ್ ಮೇಲ್ಮನವಿ ಪ್ರಾಧಿಕಾರದ ಸದಸ್ಯರು ಕೇಂದ್ರ/ರಾಜ್ಯ ಸರ್ಕಾರದ ಆದೇಶಗಳ ಅನುಸಾರ ಸಿಟ್ಟಿಂಗ್ ಫೀಜು, ಸಂಭಾವನೆ ಇತ್ಯಾದಿ ಸೌಲಭ್ಯಗಳಿಗೆ ಅರ್ಹರಾಗಿರುವರು. ಪ್ರಸ್ತುತ ಮಾಸಿಕ ರೂ.25000/- ಗೌರವಧನ ಹಾಗೂ ಮಾಸಿಕ ಗರಿಷ್ಠ 20 ಸಿಟ್ಟಿಂಗ್‌ಗಳ ಮಿತಿಗೊಳಪಟ್ಟು ಪ್ರತಿ ಸಿಟ್ಟಿಂಗ್ಸ್‌ಗೆ ರೂ.2500/- ರಂತೆ ಸಿಟ್ಟಿಂಗ್ ಫೀಜು ಪಾವತಿಸಲು ಅವಕಾಶವಿರುತ್ತದೆ.

ಓಂಬುಡ್ಸ್‌ಮನ್ ಮೇಲ್ಮನವಿ ಪ್ರಾಧಿಕಾರದ ಸದಸ್ಯರಾಗಿ ಬೆಂಗಳೂರು ಕೇಂದ್ರ ಕಛೇರಿಯಲ್ಲಿ ಕಾರ್ಯನಿರ್ವಹಿಸಲು ಆಸಕ್ತಿ ಇರುವ ಅರ್ಹ ವ್ಯಕ್ತಿಗಳು ಇಲಾಖೆಯ ವೆಬ್‌ಸೈಟ್: www.rdpr.karnataka.gov.in ನಲ್ಲಿ ನಿಗಧಿತ ನಮೂನೆಯ ಅರ್ಜಿಯನ್ನು ಅವರೋಹಣ (download) ಮಾಡಿಕೊಂಡು, ತಮ್ಮ ಭಾವಚಿತ್ರವನ್ನೊಳಗೊಂಡ ವ್ಯಕ್ತಿತ್ವ ಪರಿಚಯದ ಹಾಗೂ ಕಾರ್ಯ ನಿರ್ವಹಿಸಿರುವ ಸೇವಾನುಭವದ ಪ್ರಮಾಣ ಪತ್ರ ಹಾಗೂ ಇತರೆ ಅವಶ್ಯಕ ದಾಖಲೆಗಳೊಂದಿಗೆ **ದಿನಾಂಕ:31.05.2022 ರೊಳಗೆ** ತಲುಪುವಂತೆ ಆಯುಕ್ತರು ಗ್ರಾಮೀಣಾಭಿವೃದ್ಧಿ, ಗ್ರಾಮೀಣಾಬಿವೃದ್ಧಿ ಆಯುಕ್ತಾಲಯ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, 5ನೇ ಮಹಡಿ, ಪ್ಲಾಟ್ ನಂ.1234, ಕೆ.ಎಸ್.ಐ.ಐ.ಡಿ.ಸಿ. ಕಟ್ಟಡ, ಐ.ಟಿ. ಪಾರ್ಕ್, ಸೌತ್ ಬ್ಲಾಕ್, ರಾಜಾಜಿನಗರ, ಇಂಡಸ್ಟ್ರೀಯಲ್ ಎಸ್ಟೇಟ್, ಬೆಂಗಳೂರು-560044 ಇವರಿಗೆ ಸಲ್ಲಿಸುವುದು. ನಿಗದಿಪಡಿಸಿರುವ ದಿನಾಂಕದ ನಂತರ ಸ್ವೀಕೃತವಾಗುವ ಅಥವಾ ಅಪೂರ್ಣ ಮಾಹಿತಿ ಹೊಂದಿರುವ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ. (ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ:080-22342163 ಅನ್ನು ಸಂಪರ್ಕಿಸಬಹುದಾಗಿದೆ).

10/05/22

ಆಯುಕ್ತರು ಗ್ರಾಮೀಣಾಭಿವೃದ್ಧಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

06/05/22

For more job news visit : www.kpscvaani.com

ಭಾವಚಿತ್ರ

ಒಂಬುಡ್ಸ್‌ಮನ್ ಮೇಲ್ಮನವಿ ಪ್ರಾಧಿಕಾರದ ಸದಸ್ಯರ ನೇಮಕಾತಿಯ ಅರ್ಜಿ ನಮೂನೆ:

1	ವೈಯಕ್ತಿಕ ಮಾಹಿತಿ ವಿವರ :	
1.1	ಹೆಸರು :	
1.2	ವಯಸ್ಸು : (.05.2022 ದಿನಾಂಕದಲ್ಲಿದ್ದಂತೆ) (ಜನನ ಪ್ರಮಾಣ ಪತ್ರ ಲಗತ್ತಿಸುವುದು)	
1.3	ಅಂಚೆ ವಿಳಾಸ ಅಥವಾ ಪತ್ರ ವ್ಯವಹಾರದ ವಿಳಾಸ:	
1.4	ದೂರವಾಣಿ/ಮೊಬೈಲ್ ಸಂಖ್ಯೆ/ಇ-ಮೇಲ್ ಐಡಿ:	
1.5	ಖಾಯಂ ವಿಳಾಸ : (ವಾಸಸ್ಥಳದ ರುಜುವಾತು ದಾಖಲಾತಿಯನ್ನು ಲಗತ್ತಿಸುವುದು)	
1.6	ನೀವು ವೈದ್ಯಕೀಯವಾಗಿ (ದೈಹಿಕವಾಗಿ & ಮಾನಸಿಕವಾಗಿ) ಕ್ಷೇತ್ರಗಳ ಭೇಟಿ ನಡೆಸಲು ದೃಢಕಾಯರಾಗಿರುವಿರಾ? (ದೃಢೀಕೃತ ವೈದ್ಯಕೀಯ ಪ್ರಮಾಣ ಪತ್ರ ಲಗತ್ತಿಸುವುದು)	
1.7	ರಾಜಕೀಯ ಪಕ್ಷದ ಸದಸ್ಯರೇ ? (ಪಬ್ಲಿಕ್ ನೋಟರಿಯಿಂದ ಧೃಢೀಕರಿಸಿದ ವೈಯಕ್ತಿಕ ಪ್ರಮಾಣ ಪತ್ರವನ್ನು ಲಗತ್ತಿಸುವುದು.)	
1.8	ಅ) ಕ್ರಿಮಿನಲ್ ಪ್ರಕರಣದಲ್ಲಿ ಶಿಕ್ಷೆಗೊಳಗಾಗಿದ್ದೀರಾ/ಆರೋಪ ಪಟ್ಟಿ ದಾಖಲಾಗಿದೆಯೇ? ಆ) ಇಲಾಖಾ ವಿಚಾರಣೆಯಲ್ಲಿ ದಂಡನೆಗೆ ಒಳಪಟ್ಟಿರುವಿರೇ?/ಯಾವುದೇ ಇಲಾಖಾ ವಿಚಾರಣೆ ಬಾಕಿ ಇದೆಯೇ? (ಪಬ್ಲಿಕ್ ನೋಟರಿಯಿಂದ ಧೃಢೀಕರಿಸಿದ ವೈಯಕ್ತಿಕ ಘೋಷಣಾ ಪ್ರಮಾಣ ಪತ್ರವನ್ನು ಸಲ್ಲಿಸುವುದು)	
1.9	ಯಾವುದೇ ಸಾಮರ್ಥ್ಯದಲ್ಲಿ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯನ್ನು ಅನುಷ್ಠಾನಗೊಳಿಸುವ ಹೊಣೆಗಾರಿಕೆ ಹೊಂದುವಿರಾ?	
2	ವೃತ್ತಿ ಪರ ಮಾಹಿತಿ ವಿವರ :	
2.1	ವಿದ್ಯಾರ್ಹತೆ : (ಅಧಿಕೃತ ಪ್ರಮಾಣ ಪತ್ರವನ್ನು ಲಗತ್ತಿಸುವುದು). (ಕನಿಷ್ಠ ವಿದ್ಯಾರ್ಹತೆ: ಅಂಗೀಕೃತ ವಿಶ್ವವಿದ್ಯಾನಿಲಯದಿಂದ ಪದವಿ)	
2.2	ಮೇಲ್ಮನವಿ ಪ್ರಾಧಿಕಾರದ ಯಾವ ಕ್ಷೇತ್ರದ ಸದಸ್ಯ ಹುದ್ದೆಗೆ ಅರ್ಜಿ ಸಲ್ಲಿಸಲು ಬಯಸುತ್ತೀರಿ? (ನಾಗರೀಕ ಸೇವೆ(Civil Service) ಅಥವಾ ನಾಗರೀಕ ಸೇವಾ ಸಂಘಟನೆ(Civil Society Organization)	
2.3	ನಾಗರೀಕ ಸೇವೆ(Civil Service) ಅಥವಾ ನಾಗರೀಕ ಸೇವಾ ಸಂಘಟನೆ(Civil Society Organization)ಯಲ್ಲಿ ಕನಿಷ್ಠ 30 ವರ್ಷಗಳ ಅನುಭವ ಹೊಂದಿರುವ ವಿವರಗಳು.(ಪ್ರಮಾಣ ಪತ್ರ ಒದಗಿಸುವುದು)	
2.4	ಯಾವುದಾದರೂ ಸೊಸೈಟಿ/ವೃತ್ತಿಕಾಯ ಸಂಸ್ಥೆಯ ಸದಸ್ಯರೇ? ಇದ್ದಲ್ಲಿ ವಿವರಗಳನ್ನು ನೀಡುವುದು :	
3	ಸ್ವಯಂ ಘೋಷಣೆ:	

ಮೇಲೆ ನೀಡಿರುವ ಮಾಹಿತಿಯು ತಪ್ಪೆಂದು ಕಂಡು ಬಂದಲ್ಲಿ ಅನ್ವಯವಾಗುವ ಕಾನೂನಿನ್ವಯ/MGNREGA ಮಾರ್ಗಸೂಚಿಗಳನ್ವಯ ಕ್ರಮ ಜರುಗಿಸಬಹುದೆಂದು ಅರ್ಥೈಸಿಕೊಂಡಿದ್ದೇನೆ.

ದಿನಾಂಕ:
ಸ್ಥಳ:

ಅರ್ಜಿದಾರರ ಹೆಸರು ಮತ್ತು ಸಹಿ: